**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,**
**ದಕ್ಷಿಣ ಕನ್ನಡ, ಮಂಗಳೂರು.**

ಸೆಷನ್ಸ್ ಕೇಸ್ ನಂಬ್ರ **5/2024**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶ್ರೀ ರಾಘವೇಂದ್ರ ಕೆ. | ಪ್ರಾಸಾಃ 13 |
| ತಂದೆಯ ಹೆಸರು | : | ಕೃಷ್ಣಪ್ಪ | ಚಾಸಾಃ 23 |
| ಪ್ರಾಯ | : | 28 ವರ್ಷ | **ದಿನಾಂಕಃ 23.08.2024** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಟ್ರಾವೆಲ್ ಏಜೆನ್ಸಿ ಮಾಲೀಕ | |
| ವಾಸಸ್ಥಳ | : | ಅವರಗೆರೆ, ದಾವಣಗೆರೆ | |

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ

ನಾನು ಕಳೆದ 6-7 ವರ್ಷಗಳಿಂದ ದಾವಣಗೆರೆಯಲ್ಲಿ "ಲಕ್ಷ್ಮೀ ಟೂರ್ಸ್ ಅಂಡ್ ಟ್ರಾವೆಲ್ಸ್" ಅಂತ ಟ್ರಾವೆಲ್ ಏಜೆನ್ಸಿ ನಡೆಸುತ್ತಿದ್ದೇನೆ. ಕಾರು ನಂಬ್ರ ಕೆಎ-17-ಡಿ-2299 ಇಟಿಯೋಸ್ ಕಾರು ನನಗೆ ಸೇರಿದ್ದಾಗಿದೆ ಮತ್ತು ಅದು ಟೂರಿಸ್ಟ್ ಕಾರು ಆಗಿದೆ.

2. ಸದರಿ ಪ್ರಕರಣದ 4ನೇ ಆರೋಪಿಯಾದ ಸನಾವುಲ್ಲ ನನಗೆ ಪರಿಚಯದವರು ಮತ್ತು ನನ್ನ ಜೊತೆಯಲ್ಲಿ ಗಾಡಿ ಚಾಲಕರಾಗಿ ಕೆಲಸ ಮಾಡುತ್ತಿದ್ದರು. ದಿನಾಂಕಃ 16.09.2023 ರಂದು ಸದರಿ 4ನೇ ಆರೋಪಿಯು ಅವರ ಸಂಬಂಧಿಕರ ಮದುವೆ ಇದೆ ಎಂದು ಹೇಳಿ, ಮೇಲೆ ತಿಳಿಸಿದ ನನ್ನ ಕಾರನ್ನು ಬಾಡಿಗೆಗೆ ತೆಗೆದುಕೊಂಡು ಹೋಗಿರುತ್ತಾರೆ. ಸದರಿ 4ನೇ ಆರೋಪಿಯು ಎರಡು ದಿನದ ಬಳಿಕ ಕಾರನ್ನು ಮರಳಿ ಕೊಡುವುದಾಗಿತ್ತು, ಆದರೆ ಅವರು ಬರದ ಕಾರಣ ನಾನು ಅವರಿಗೆ ದೂರವಾಣಿ ಕರೆ ಮಾಡಲಾಗಿ, ಆತ ಕರೆಯನ್ನು ಸ್ವೀಕರಿಸಿರುವುದಿಲ್ಲ. ಅದಕ್ಕೆ ನಾನು

4ನೇ ಆರೋಪಿಯ ಮನೆಯನ್ನು ಹುಡುಕಿಕೊಂಡು ಮನೆಯ ಬಳಿ ಹೋಗಿ ನೋಡಲಾಗಿ, ಸದರಿ ಮನೆಯಲ್ಲಿ ಅವರು ಇರಲಿಲ್ಲ. ಅದಾದ 7 ದಿನದ ಬಳಿಕ ಮುಲ್ಕಿ ಪೊಲೀಸರು ನನಗೆ ಫೋನ್ ಕರೆ ಮಾಡಿ ತಿಳಿಸಿದ್ದೇನೆಂದರೆ, ನನ್ನ ಕಾರನ್ನು ಒಂದು ಮಹಿಳೆಯ ಕರಿಮಣಿ ಸರವನ್ನು ದರೋಡೆ ಮಾಡಲು ಮುಲ್ಕಿಯಲ್ಲಿ ಉಪಯೋಗಿಸಲಾಗಿದೆ ಅಂತ ಪೊಲೀಸರು ತಿಳಿಸಿದರು. ತಕ್ಷಣ ನಾನು ಮುಲ್ಕಿ ಪೊಲೀಸು ಠಾಣೆಗೆ ಬಂದು ನೋಡಲಾಗಿ ನನ್ನ ಸದರಿ ಕಾರು ಪೊಲೀಸು ಠಾಣೆಯಲ್ಲಿತ್ತು.

4. ನಂತರ ನಾನು ನನ್ನ ವಾಹನವನ್ನು ಮೂಡಬಿದ್ರೆ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು, ನಂತರ ಪೊಲೀಸು ಠಾಣೆಯಲ್ಲಿ ಮಹಜರು ಮಾಡಿ ದಿನಾಂಕಃ 25.10.2023 ರಂದು ವಶಕ್ಕೆ ಪಡೆದಿರುತ್ತೇನೆ. ನನ್ನ ಕಾರಿನ ಫೋಟೋ ನೋಡಿದರೆ ಗುರುತಿಸಬಲ್ಲೆ. ಈಗ ನೋಡುತ್ತಿರುವ 4 ಫೋಟೋಗಳನ್ನು ಸಾಕ್ಷಿ ಗುರುತಿಸಿದ ಮೇರೆಗೆ ಸದರಿ 4 ಫೋಟೋಗಳನ್ನು ಒಟ್ಟಾಗಿ ನಿ**.**ಪಿ**.28(4)** ಎಂದು ಗುರುತಿಸಲಾಯಿತು. ನನ್ನ ವಾಹನವನ್ನು ಬಿಡುಗಡೆ ಮಾಡುವ ಕಾಲಕ್ಕೆ ಪೊಲೀಸರು ತಯಾರಿಸಿದ ಮಹಜರನ್ನು ನೋಡಿದರೆ ಗುರುತಿಸಬಲ್ಲೆ. ಸದರಿ ಮಹಜರನ್ನು ನಿ.ಪಿ.23 ಎಂದು ಈಗಾಗಲೇ ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ**.**ಪಿ**.23(**ಬಿ**)** ಎಂದು ಗುರುತಿಸಲಾಯಿತು. ಆ ರೀತಿ ನನ್ನ ವಾಹನವನ್ನು ಬಿಡುಗಡೆ ಮಾಡಿದ ಕಾಲಕ್ಕೆ ತೆಗೆದ ಫೋಟೋವನ್ನು ಈಗಾಗಲೇ ನಿ.ಪಿ.24 ಎಂದು ಗುರುತಿಸಲಾಗಿದೆ. ಪೊಲೀಸರಿಗೆ ಈ ಬಗ್ಗೆ ನಾನು ಹೇಳಿಕೆ ಕೊಟ್ಟಿರುತ್ತೇನೆ. 4ನೇ ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ.

**ಪಾಟೀ ಸವಾಲುಃ 3 ಮತ್ತು 5ನೇ ಆರೋಪಿ ಪರ ಶ್ರೀ ವಿ.ಆರ್.ಎ. ವಕೀಲರಿಂದ ಮತ್ತು 1, 2 ಮತ್ತು 6ನೇ ಆರೋಪಿತರ ಪರ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಶ್ರೀ ಜಿ.ವಿ.ಜಿ. ವಕೀಲರಿಂದಃ**

(1 ರಿಂದ 6ನೇ ಆರೋಪಿತರ ಪರ ವಕೀಲರು ಈ ಸಾಕ್ಷಿಯ ಪಾಟೀ ಸವಾಲು ಏನೂ ಇಲ್ಲ ಎಂದು ನುಡಿದಿರುತ್ತಾರೆ.)

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.